ಅರೆನಗ್ನ ಮಾಡೆಲ್ಲುಗಳ ಫೋಟೊ ತೆಗೆಯುತ್ತ ಗಳಿಸಿದ ಹಣವನ್ನು, ಸಂಪೂರ್ಣ ನಗ್ನ ಮಾಡೆಲ್ಲುಗಳ ಫೋಟೊ ಸೆರೆಹಿಡಿಯಲೋಸುಗ ವ್ಯಯಿಸತೊಡಗಿದೆ. ಐ ಸ್ವೇರ್, ಈ ಪೂರ್ಣ ಬೆತ್ತಲಿರುವ ಮಾಡೆಲ್ಲುಗಳ ಫೋಟೊ ತೆಗೆಯುವ 'ಕಿಕ್'ನ ಮುಂದೆ ಇವೆಲ್ಲ ಏನೂ ಅಲ್ಲ. ಅದೇ ನನ್ನ ಹವ್ಯಾಸವೂ ವ್ಯಸನವೂ ಆಗಿಹೋಯಿತು' ಎಂದ ಆತ.

ಇವನದು ಅಂಥ ಘನಂದಾರಿ ಕಥೆಯೇನಲ್ಲ. ಯಾವುದೋ ಪೋರ್ನ್ ಸ್ಕ್ಯಾಮಿನಲ್ಲಿ ಸಿಕ್ಕಿಹಾಕಿಕೊಂಡು ದಿವಾಳಿಯಾಗಿ ಅಮೆರಿಕ ಬಿಟ್ಟು ಓಡಿ ಬಂದಿರಬೇಕು ಎಂದು ನಾನು ಯೋಚಿಸತೊಡಗಿದೆ. ಅದನ್ನು ಸಹಜವಾಗಿ ಊಹಿಸಿದ ಆತ,

'ನಿನ್ನ ತಲೆಯಲ್ಲಿ ಏನು ಓಡ್ತಾ ಇದೆ ಅನ್ನೋದನ್ನು ಬಲ್ಲೆ. ಅಂಥದ್ದೇನೂ ಇಲ್ಲ ಮಾರಾಯ. ಸುಮ್ಮನೇ ಮಾತಿಗೆ ಹಾಗೆ ಹೇಳಿದೆನಷ್ಟೇ. ನೇಕೆಡ್ ಮಾಡೆಲ್ಸ್ ಅಂತಾ ನಾನು ಅಂದದ್ದು ವನ್ಯಜೀವಿಗಳಿಗೆ' ಎನ್ನುವ ಸ್ಪಷ್ಟೀಕರಣ ನೀಡಿದ.

* * *

ವನ್ಯಜೀವಿ ಛಾಯಾಗ್ರಹಣದ ಹುಚ್ಚು ಹಿಡಿಸಿಕೊಂಡ ಆತ ಉದ್ದುದ್ದ ಕೊಳವೆಯ ಕ್ಯಾಮರಾ ಹೊತ್ತು ಕಾಡು ಮೇಡು ಅಲೆದನಂತೆ. ಮೆಕ್ಸಿಕೋದ ಕಾಡುಗಳಲ್ಲಿ ಈ ತರಹದ ಹವ್ಯಾಸಿಗಳಿಗೆಂದೇ ಒಂದು ವಿಶೇಷ ವ್ಯವಸ್ಥೆಯಿದೆ ಎಂಬುದನ್ನು ತಿಳಿದು, ಅಲ್ಲಿಗೂ ಹೋದ. ಅದೆಂತಹ ಅನನ್ಯ ಫೋಟೊಗಳನ್ನು ಅಲ್ಲಿ ತೆಗೆಯಲು ಸಾಧ್ಯವಾಗುತ್ತಿತ್ತೆಂದರೆ, ಕೇಳಿದಷ್ಟು ಹಣ ತೆತ್ತು ಪದೇ ಪದೇ ಹೋಗುತ್ತಿದ್ದ.

'ಅದೆಂಥಾ ವಿಶೇಷ ವ್ಯವಸ್ಥೆಯಿದೆ ಅಲ್ಲಿ?' ಎನ್ನುವ ನನ್ನ ಪ್ರಶ್ನೆಗೆ ಉತ್ತರವಾಗಿ ಆತ ನೀಡಿದ ಮಾಹಿತಿ ಆಘಾತಕಾರಿಯಾಗಿತ್ತು.

ಅದೊಂದು ದೊಡ್ಡ ಮಾಫಿಯಾ. ಇಂಥ ಶ್ರೀಮಂತ ಶೋಕಿದಾರರ ಕ್ಯಾಮರಾಕ್ಕೆ ಸುಲಭದಲ್ಲಿ ಸೆರೆ ಸಿಕ್ಕಲೆಂದೇ ಅಲ್ಲಿಯ ಹುಲಿ ಸಿಂಹಗಳಿಗೆ ಮೆದು ಪ್ರಮಾಣದ ಡ್ರಗ್ಸ್ ನೀಡಿರುತ್ತಾರೆ. ಕಾಡ ನಡುವಿನ ಕೊಳದ ನೀರಲ್ಲಿ ಮಾದಕ ದ್ರವ್ಯ ಬೆರೆಸಿ, ಪ್ರಾಣಿಗಳೆಲ್ಲ ಮತ್ತೆ ಮತ್ತೆ ಅಲ್ಲಿ ನೀರು ಕುಡಿಯಲು ಬರುವಂತೆ ಮಾಡುತ್ತಾರೆ. ಆ ಕೊಳದ ಸುತ್ತಮುತ್ತಲಿನ ಮರಗಳ ಮರೆಯಲ್ಲಿ ಫೋಟೊ ತೆಗೆಯುವವರಿಗೆ ಅನುಕೂಲ ಒದಗಿಸಿರುತ್ತಾರೆ. ಪಕ್ಷಿಗಳಿಗೆಲ್ಲ ಮತ್ತು ಬರಿಸುವ ಕಾಳು ಕಡಿ ತಿನ್ನಿಸಿ ಅವುಗಳ ಆಹಾರ ಕ್ರಮವನ್ನೇ ಬದಲಾಯಿಸುವುದು, ಮರದ ಕೊಂಬೆಗಳಿಗೆಲ್ಲ ಅಂಟು ಬಳಿದು ಅಲ್ಲಿ ಕುಳಿತ ಹಕ್ಕಿಗಳು ರೆಕ್ಕೆ ಬಡಿಬಡಿಯುತ್ತ ಹಾರಲು ಹೆಣಗುವಂತೆ ಮಾಡುವುದು... ಹೀಗೇ ಆ ಇಡೀ ಕಾಡಿನ ಇಕೋ ಸಿಸ್ಟಂ ಅನ್ನೇ ಫೋಟೊಗ್ರಫಿಗೆ ಪೂರಕವಾಗುವಂತೆ ಮಾರ್ಪಡಿಸಲಾಗುತ್ತದೆ... ಇತ್ಯಾದಿ.

ಆಫ್ರಿಕಾದ ಕೆಲವು ಕಾಡುಗಳಲ್ಲಿ, ಬೇಟೆಯಾಡುವವರಿಗಾಗಿ ಇಂಥದೇ ಒಂದು ವಿಶಿಷ್ಟ ವ್ಯವಸ್ಥೆ ಜಾರಿಯಲ್ಲಿದೆ ಎಂಬುದು ಕೇಳಿ ಗೊತ್ತಿತ್ತು ನನಗೆ. ಅಲ್ಲಿ ವನ್ಯ ಜೀವಿಗಳಿಗೆ ಮಾದಕ ದ್ರವ್ಯ ಕುಡಿಸಿ, ಅವು ಬೇಟೆಗಾರರಿಗೆ ಸುಲಭ ತುತ್ತಾಗುವಂತೆ ಮಾಡಲಾಗುತ್ತದೆ. ಬೇಟೆಗಾರನಿಗೆ ಆಟದಲ್ಲಿ ಸಾಕಷ್ಟು ಮಜವೂ ಸಿಗುವಂತಿರಬೇಕು, ಅದೇ ವೇಳೆ ಬೇಟೆ ಖಾತ್ರಿಯಾಗಿ ದಕ್ಕುವಂತೆಯೂ ಇರಬೇಕು. ಇಂಥ ಗ್ಯಾರಂಟೀ ಯೋಜನೆಯಿದು. ಗಲ್ಫ್ ದೇಶದ ಶೇಖ್‌ಗಳು, ಅಮೆರಿಕ-ಯುರೋಪಿನ ಅತಿ ಸಿರಿವಂತ ಜನರು ಬೇಟೆಯಾಡಲು ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೋಗುತ್ತಾರೆ. ಆದರೆ, ಹೀಗೆ ಛಾಯಾಚಿತ್ರಕ್ಕೋಸ್ಕರ ಕಾಡಿನ ಭಾಗವೊಂದರ ಪ್ರಾಣಿಗಳ ಜೀವನಕ್ರಮವನ್ನೇ ತಮ್ಮ ಹತೋಟಿಗೆ ತೆಗೆದುಕೊಳ್ಳುವ ಸಂಗತಿ ನಾನು ಮೊದಲಬಾರಿಗೆ ಕೇಳಿದ್ದೆ.

'ರಾಜಕೀಯ ನಾಯಕರು, ಸರ್ಕಾರಿ ಅಧಿಕಾರಿಗಳ ಶಾಮೀಲಿನಿಂದಲೇ ಇವೆಲ್ಲ ನಡೆಯುವುದು. ಇದು ಹೊಸತೇನೂ ಅಲ್ಲ. ಜಗತ್ತಿನ ಹಲವೆಡೆ ಈ ಮಾಫಿಯಾ ಅಸ್ತಿತ್ವದಲ್ಲಿದೆ, ಬೇಕಾದರೆ ವಿಚಾರಿಸಿ ನೋಡು, ನಿಮ್ಮ ಭಾರತದಲ್ಲೂ ಇದು ನಡೆಯುತ್ತೆ. ಸೋ ಕಾಲ್ಡ್ ನ್ಯಾಷನಲ್ ಪಾರ್ಕುಗಳಲ್ಲಿ ಈ ದಂಧೆ ಹೆಚ್ಚು' ಎಂದ ಆತನ ಮಾತನ್ನು ಅರಗಿಸಿಕೊಳ್ಳಲು ನನಗೆ ಕಷ್ಟವೆನಿಸಿತು.

'ಅಂದಹಾಗೆ, ಇಲ್ಲೇನು ನಡೆಯುತ್ತಿದೆ ಅಂದುಕೊಂಡಿದ್ದೀಯಾ?' ಎನ್ನುತ್ತ ಮಾತು ಮುಂದುವರಿಸಿದ ವಾರೆಂಟ್ ಸಾಟ್.

'ಗಾಳಕ್ಕೆ ಸಿಕ್ಕಿಸಿದ ಮಾಂಸದ ತುಂಡಿಗೆ ಅದೇನನ್ನು ಬೆರೆಸಿರಬಹುದು, ಮೊಸಳೆಗಳು ಆ ಪರಿಯಲ್ಲಿ ಮೇಲಕ್ಕೆ ನೆಗೆದು ಅದನ್ನು ಕಚ್ಚಿಕೊಳ್ಳುತ್ತವಲ್ಲ? ಬೋಗುಣಿಯಲ್ಲಿದ್ದುದು ಬರೀ ಕಾಳುಕಡಿಯಾಗಿದ್ದರೆ ಮಕಾವ್ ಪಕ್ಷಿಗಳು ಅರಸಿಬಂದು ನಿನ್ನ ಹೆಗಲ ಮೇಲೆ